ದಿನಾಂಕಃ 13.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ ವಾದಿಯ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ನನ್ನ ಸಹೋದರ ಪಿಡಬ್ಲೂ.1 ರವರು ತನ್ನ ಸಾಕ್ಷ್ಯ ವಿಚಾರಣೆಯಲ್ಲಿ ನಿಶಾನೆ ಪಿ1 ರಿಂದ 17 ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಸದರಿ ದಾಖಲೆಗಳನ್ನು ನನ್ನ ಸಾಕ್ಷ್ಯದಲ್ಲಿ ಅಳವಡಿಸಿಕೊಂಡಿರುತ್ತೇನೆ.

ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

ನಾನು ಬಿ.ಟೆಕ್‌ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಗೃಹಿಣಿಯಾಗಿರುತ್ತೇನೆ. ಬೇರೆ ಕೆಲಸ ಮಾಡುತ್ತಿಲ್ಲ. ನನ್ನ ಸಹೋದರ ಯುವರಾಜ್ ರವರು ಬಿ.ಇ ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಈಗಾಗಲೇ ಅವರ ಸಾಕ್ಷ್ಯ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ಅವರಿಗೆ ದಾವೆಯ ದಾವಾ ಸ್ವತ್ತಿನ ಕರಾರು ಪತ್ರದ ಬಗ್ಗೆ ಸಂಪೂರ್ಣವಾಗಿ ಗೊತ್ತಿದೆ ಎಂದರೆ ಸರಿ. ನನ್ನ ತಂದೆ ಮಾಡಿಕೊಂಡಿದ್ದ ರದ್ದತಿ ಕರಾರುಪತ್ರದ ಬಗ್ಗೆ ನನ್ನ ತಮ್ಮರವರಿಗೆ ಗೊತ್ತಿಲ್ಲ. ಅವರ ಸಾಕ್ಷ್ಯ ವಿಚಾರಣೆ ಮುಂದುವರೆಸಿದರೆ ನಿಜಸ್ಥಿತಿ ಗೊತ್ತಾಗುತ್ತದೆ ಎಂದು ಅವರ ಸಾಕ್ಷ್ಯವನ್ನು ವಜಾ ಮಾಡಿಸಿಕೊಂಡು ನಾನು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿ.ಇ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮಾಡಿರುತ್ತೇನೆ. ಆಗ ನಾನು ಅಲ್ಲಿಯೇ ವಾಸವಿದ್ದೆ ಎಂದರೆ ಸರಿ. ನೀವು ಮೈಸೂರಿನಲ್ಲಿ ಇದ್ದ ಕಾರಣ ಈ ದಾವಾ ಸ್ವತ್ತಿನ ಕರಾರಿನ ಬಗ್ಗೆ ನಿಮಗೇನೂ ಗೊತ್ತಿಲ್ಲ ಎಂದರೆ ಸಾಕ್ಷಿ ಕರಾರು ಆಗಿರುವುದು 2019 ರಲ್ಲಿ ನಾನು ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿರುವುದು 2012 ರಲ್ಲಿ ಎನ್ನುತಾರೆ.

2. ನನ್ನ ತಂದೆ ಸಿವಿಲ್ ಕಾಂಟ್ರ್ಯಾಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಅವರು ಗೋಕಾಕ್‌ನಲ್ಲಿ ವಾಸವಿದ್ದರು. ಮಕ್ಕಳಗೇರಿ ಗ್ರಾಮಕ್ಕೆ ನೀವು ಮತ್ತು ನಿಮ್ಮ ಸಹೋದರ

ಯಾವಾಗಲಾದರೂ ಹೋಗುವ ಪ್ರಸಂಗ ಬಂದಿತ್ತಾ ಎಂದರೆ ಸಾಕ್ಷಿ ಅಲ್ಲಿ ನಮ್ಮ ಹೊಲ ಇದೆ ಹೋಗುತ್ತೇವೆ ಎನ್ನುತ್ತಾರೆ. ಅದು ನಮ್ಮ ತಂದೆಯ ಹೆಸರಿನಲ್ಲಿ ಇದೆ. ದಾವಾ ಸ್ವತ್ತಿನ ಸರ್ವೇ ನಂ.190/1 ಆಗಿರುತ್ತದೆ. ಸದರಿ ಜಮೀನಿನ ಉತಾರದಲ್ಲಿ ವಿಠ್ಠಲ್ ಭಿಮಪ್ಪ ಸನದಿರವರ ಹೆಸರು ಇದೆ. ದಾವಾ ಸ್ವತ್ತಿನ ಚೆಕ್‌ಬಂದಿ ನನಗೆ ಗೊತ್ತಿದೆ, ಪೂರ್ವಕ್ಕೆ ಲಕ್ಷ್ಮಣರವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಹಣಮಂತರವರ ಜಮೀನು ಮತ್ತು ದಕ್ಷಿಣಕ್ಕೆ ಮುತ್ತೆಪ್ಪರವರ ಜಮೀನು ಇರುತ್ತದೆ.

3. ನನ್ನ ತಂದೆ ಹಾಗೂ 1 ನೇ ಪ್ರತಿವಾದಿ ಆತ್ಮಿಯ ಸ್ನೇಹಿತರು ಎಂದರೆ ಸರಿ. ಆ ರೀತಿ ಇದ್ದ ಕಾರಣ ಅವರು ಹಣ ಕೊಟ್ಟು ಮತ್ತು ತೆಗೆದುಕೊಳ್ಳುವ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. 2017 ರಲ್ಲಿ ನನ್ನ ತಂದೆಯಿಂದ 1 ನೇ ಪ್ರತಿವಾದಿ 5 ಲಕ್ಷ ಹಣ ಸಾಲ ಪಡೆದುಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅದರ ಭದ್ರತೆಗಾಗಿ ನಿಮ್ಮ ತಂದೆ ಒಂದು ನೊಂದಣಿ ಮಾಡಿದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ 2019 ರಲ್ಲಿ ಆದ ಕರಾರುಪತ್ರದ ಬಗ್ಗೆ ಮಾತ್ರ ಗೊತ್ತಿರುವುದು ಎನ್ನುತ್ತಾರೆ. 2019 ರಲ್ಲಿ 1 ನೇ ಪ್ರತಿವಾದಿ ಸದರಿ 5 ಲಕ್ಷ ಸಾಲದ ಹಣವನ್ನು ನಿಮ್ಮ ತಂದೆಗೆ ನೀಡಿ ಸದರಿ ಕರಾರುಪತ್ರವನ್ನು ರದ್ದು ಮಾಡಲು ಕೇಳಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ರದ್ದತಿ ಪತ್ರ ಮಾಡಿಕೊಡುತ್ತೇನೆ ಎಂದು ಹೇಳಿ ನನ್ನ ತಂದೆಯವರು, ಪತ್ರಬರಹಗಾರರು ಮತ್ತು ಸಾಕ್ಷಿಗಳ ಜೊತೆಗೆ ಸೇರಿಕೊಂಡು ಪ್ರತಿವಾದಗಳಿಗೆ ಮೋಸ ಮಾಡಬೇಕೆಂದು ಈ ದಾವಾ ಖರೀದಿ ಕರಾರುಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

4. 1 ನೇ ಪ್ರತಿವಾದಿ ಅಥವಾ ಉಳಿದ ಪ್ರತಿವಾದಿಗಳಾಗಲಿ ದಾವಾ ಸ್ವತ್ತನ್ನು ಮಾರಾಟ ಮಾಡುತ್ತೇನೆ ಎಂದು ನನ್ನ ತಂದೆಗೆ ಹೇಳಿಲ್ಲ ಹಾಗೂ ಕರಾರುಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರಿಂದ ಅವರು ದಾವಾ ಸ್ವತ್ತನ್ನು ಮಾರಾಟ ಮಾಡಲು ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅವರು ನನ್ನ ತಂದೆಯ ಹೆಸರಿಗೆ

ಖರೀದಿ ಕರಾರುಪತ್ರ ಮಾಡಿಕೊಟ್ಟಿಲ್ಲ, ಖರೀದಿ ಕರಾರು ಪತ್ರದ ರದ್ದತಿ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಬಾಂಡ್ ರೈಟರ್ ಹಾಗೂ ಸಬ್ ರಿಜೀಸ್ಟ್ರಾರ್ ರವರ ಬಳಿ ಆಗಾಗ ಹೋಗಿ ಬರುತ್ತಿದ್ದರು, ಹಾಗಾಗಿ ಅವರೊಂದಿಗೆ ಒಡನಾಟ ಇತ್ತು ಎಂದರೆ ಸರಿಯಲ್ಲ, ಕೆಲಸ ಇದ್ದಾಗ ಮಾತ್ರ ಹೋಗುತ್ತಿದ್ದರು.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ